## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಶ್ರೀ ಶಿವರಾಂ ಕೆ. ಚವ್ಹಾಣ, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಔರಾದ್, ಬೀದರ್ ಜಿಲ್ಲೆ ಇವರ ವಿರುದ್ಧದ ಶಿಸ್ತು ಕ್ರಮದ ಬಗ್ಗೆ.

ಓದಲಾಗಿದೆ: 1. ಸರ್ಕಾರದ ನೋಟೀಸ್ ಸಂಖ್ಯೆ:ಗ್ರಾಅಪ/141/ವಿಸೇಬಿ/2013 ದಿ:28-10-2013.
2. ಶ್ರೀ ಶಿವರಾಂ ಕೆ. ಚವ್ಹಾಣ ಇವರ ಲಿಖಿತ ಹೇಳಿಕೆ ದಿ:31-11-2013.

------

ಪ್ರಸ್ತಾವನೆ:

ಶ್ರೀ ಶಿವರಾಂ ಕೆ. ಚವ್ಹಾಣ, ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಬಸವಕಲ್ಯಾಣ, ಬೀದರ್ ಜಿಲ್ಲೆ ಇವರು ಕಾರ್ಯನಿರ್ವಾಹಕ ಅಧಿಕಾರಿಯಾಗಿ ತಾಲ್ಲೂಕು ಪಂಚಾಯತಿ ಔರಾದ್(ಬಿ), ಬೀದರ್ ಜಿಲ್ಲೆ, ಇಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ. 2007-08 ಮತ್ತು 2008-09 ನೇ ಸಾಲಿನಲ್ಲಿ ತಾಲ್ಲೂಕು ಪಂಚಾಯತ್ ಔರಾದ(ಬಿ) ಮತ್ತು ಗ್ರಾಮ ಪಂಚಾಯತಗಳಲ್ಲಿ ಪಾರದರ್ಶಕ ನಿಯಮಗಳು ಪಾಲನೆ ಆಗದೆ ಇರುವ ಬಗ್ಗೆ ಶ್ರೀ ಗುರುನಾಥ ವಡ್ಡೆ, ಪತ್ರಕರ್ತರು R/O ಔರಾದ(ಬಿ) ಇವರ ದೂರಿನ ಬಗ್ಗೆ ಸರ್ಕಾರದ ನಿರ್ದೇಶನದಂತೆ ಉಪಕಾರ್ಯದರ್ಶಿಗಳು, ಜಿಲ್ಲಾ ಪಂಚಾಯತ ಬೀದರ ಇವರ ಅಧ್ಯಕ್ಷತೆಯಲ್ಲಿ ತಪಾಸಣೆ ಮಾಡಿ ಸಲ್ಲಿಸಿರುವ ವರದಿಯಲ್ಲಿ ಕಂಡು ಬಂದಿರುವ ಈ ಕೆಳಕಂಡ ಕರ್ತವ್ಯಲೋಪದ ಆರೋಪಗಳಿಗೆ ಸಂಬಂಧಿಸಿದಂತೆ ಮೇಲೆ ಕ್ರಮ ಸಂಖ್ಯೆ (1) ರಲ್ಲಿ ಓದಲಾದ ನೋಟೀಸ್‌ನಲ್ಲಿ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ ನಿಯಂತ್ರಣ ಮತ್ತು ಮೇಲ್ಮನವಿ) 1957ರ ನಿಯಮ 12 ರಡಿ ಕಾರಣ ಕೇಳುವ ನೋಟೀಸ್ ಜಾರಿ ಮಾಡಲಾಗಿತ್ತು.

1. ಆದಿಭಾರ ಶುಲ್ಕ:- 2008-09ನೇ ಸಾಲಿಗಾಗಿ 2 ಕಾಮಗಾರಿಗಳು ನಿರ್ವಹಿಸಲಾಗಿದ್ದು, ಈ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಟೆಂಡರ್ ಪ್ರಕಟಣೆ ಮಾಡದೆ ಪಾರದರ್ಶಕ ನಿಯಮ ಅನುಸರಿಸಿರುವುದಿಲ್ಲ.
2. 200708ನೇ ಸಾಲಿನಲ್ಲಿ 12ನೇ ಹಣಕಾಸು ಯೋಜನೆ ಅಡಿಯಲ್ಲಿ 9 ಕಾಮಗಾರಿಗಳನ್ನು ಹಾಗೂ 2008-09ನೇ ಸಾಲಿನಲ್ಲಿ ಮಹಾಡೋಣಗಾಂವ ಗ್ರಾಮದ ಸಮುದಾಯ ಭವನ ರಿಪೇರಿಗಾಗಿ ರೂ.1.12 ಲಕ್ಷ ಇಡಲಾಗಿದ್ದು ಟೆಂಡರ ಕರೆಯದೆ ಪಾರದರ್ಶಕ ನಿಯಮ ಅನುಸರಿಸದೆ ಕೆಲಸ ನಿರ್ವಹಿಸಿರುವುದು.
3. ಸಮಾಜ ಕಲ್ಯಾಣ ಇಲಾಖೆಯ ಲೆಕ್ಕ ಶೀರ್ಷಿಕೆ: 2225-01-277-0-01ರಲ್ಲಿ ರೂ.3.00 ಲಕ್ಷ ಅನುದಾನ ಒದಗಿಸಿದ್ದು, ಈ ಕಾಮಗಾರಿಗೆ ಟೆಂಡರ ಕರೆಯದೆ ಪಂಚಾಯತ ರಾಜ್ ಇಂ.ವಿಭಾಗ ರವರಿಂದ ಕೆಲಸ ಮಾಡಿಸಿ ಪಾರದರ್ಶಕ ನಿಯಮ ಪಾಲಿಸಿರುವುದಿಲ್ಲ.
4. ವಿಶೇಷ ಘಟಕ ಯೋಜನೆ:- ಲೆಕ್ಕ ಶೀರ್ಷಿಕೆ:2225-01-800-0-01 ರಲ್ಲಿ 18ಲಕ್ಷ ಅನುದಾನದಲ್ಲಿ ಒಟ್ಟು ಕಾಮಗಾರಿಗಳು 12 ಇದ್ದು ಇದರಲ್ಲಿ 6 ಕಾಮಗಾರಿಗಳು ರೂ.1.00ಲಕ್ಷ ಮೇಲ್ಪಟ್ಟಿದಾಗಿರುತ್ತವೆ. ಆದರೂ ಸಹ ಟೆಂಡರ ಕರೆಯದೆ ಕಾಮಗಾರಿಗಳು ನಿರ್ವಹಿಸಿರುತ್ತಾರೆ.
5. ರಸ್ತೆ ಮತ್ತು ಸೇತುವೆ ಲೆಕ್ಕ ಶೀರ್ಷಿಕೆ: 3054-04-337-1-78ರಲ್ಲಿ ರೂ. 3.00ಲಕ್ಷ ಅನುದಾನ ಒದಗಿಸಲಾಗಿದ್ದು, ರಸ್ತೆ ಡಾಂಬರೀಕರಣ ಕಾಮಗಾರಿಗೆ ಟೆಂಡರ್ ಕರೆಯದೆ ಕೆಲಸ ನಿರ್ವಹಿಸಿರುತ್ತಾರೆ.
6. ಗಿರಿಜನ ಉಪಯೋಗಿ ಲೆಕ್ಕ ಶೀರ್ಷಿಕೆ: 2225-02-796-1-01ರಲ್ಲಿ 6.00 ಲಕ್ಷ ಅನುದಾನ ಒದಗಿಸಲಾಗಿದ್ದು, 2 ಕಾಮಗಾರಿಗಳಿಗೆ ಟೆಂಡರ್ ಕರೆಯದೆ ಕೆಲಸ ನಿರ್ವಹಿಸಿರುತ್ತಾರೆ.

7. ಸಮಾಜ ಕಲ್ಯಾಣ ಇಲಾಖೆಯ ಲೆಕ್ಕ ಶೀರ್ಷಿಕೆ: 2225-01-800-0-01, ರಲ್ಲಿ ಅನುದಾನ ರೂ.5.00 ಲಕ್ಷ ಇದ್ದು 2 ಕಾಮಗಾರಿಗಳಿದ್ದು, ಟೆಂಡರ್ ಕರೆಯದೆ ಕಾಮಗಾರಿ ನಿರ್ವಹಿಸಿರುತ್ತಾರೆ.

8. ಮಹಿಳಾ ಮತ್ತು ಮಕ್ಕಳ ಇಲಾಖೆಯ ಲೆಕ್ಕ ಶೀರ್ಷಿಕೆ: 2235-02-11-02-079ರಡಿಯಲ್ಲಿ ರೂ.1.01 ಲಕ್ಷ ಅನುದಾನ ಒದಗಿಸಿದ್ದು, ಟೆಂಡರ ಕರೆಯದೆ ಕಾಮಗಾರಿ ನಿರ್ವಹಿಸಿರುತ್ತಾರೆ.

ಸದರಿ ನೋಟೀಸಿಗೆ ಆಪಾದಿತ ಅಧಿಕಾರಿಯು ಮೇಲೆ ಕ್ರಮ ಸಂಖ್ಯೆ (2) ರಲ್ಲಿ ಓದಲಾದ ದಿನಾಂಕ:31-11-2013 ರಲ್ಲಿ ಲಿಖಿತ ಹೇಳಿಕೆಯನ್ನು ಸಲ್ಲಿಸಿ, ಅಧಿಭಾರ ಶುಲ್ಕ ಯೋಜನೆಯಡಿ 2008-09ನೇ ಸಾಲಿಗಾಗಿ 2 ಕಾಮಗಾರಿಗಳನ್ನು ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ ಔರಾದ್(ಬಿ) ದಲ್ಲಿ ಕಾರ್ಯನಿರ್ವಹಿಸುತ್ತಿರುವ ಅಭಿಯಂತರುಗಳ ಮೂಲಕ ನಿರ್ವಹಿಸಲಾಗಿದೆಂದು, 12ನೇ ಹಣಕಾಸು ಯೋಜನೆಯಡಿ 9 ಕಾಮಗಾರಿಗಳನ್ನು ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ ಔರಾದ್(ಬಿ)ದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಭಿಯಂತರುಗಳ ಮೂಲಕ ನಿರ್ವಹಿಸಲಾಗಿದೆಂದು, ಸಮಾಜ ಕಲ್ಯಾಣ ಇಲಾಖೆಗೆ ಸಂಬಂಧಪಟ್ಟ ಲೆಕ್ಕ ಶೀರ್ಷಿಕೆ 2225-01-277-0-01 ಗೆ ಸಂಬಂಧಿಸಿದ ಕಾಮಗಾರಿಗಳು ಅನುದಾನದ ಲ್ಯಾಪ್ಸ್ ಮಾಡದ ಉದ್ದೇಶದಿಂದ ಇಲಾಖಾ ವತಿಯಿಂದ ನಿರ್ವಹಿಸಲಾಗಿದೆ, ಹಾಗೂ ಇದರಲ್ಲಿ ಯಾವುದೇ ರೀತಿಯ ಹಣ ದುರುಪಯೋಗವಾಗಿರುವುದಿಲ್ಲವೆಂದು, ವಿಶೇಷ ಘಟಕ ಯೋಜನೆಯ ಲೆಕ್ಕ ಶೀರ್ಷಿಕೆ 2225-01-800-0-01 ರಲ್ಲಿಯ ಕಾಮಗಾರಿಗಳನ್ನು ಉಪವಿಭಾಗ ಔರಾದ್(ಬಿ)ನ ಅಭಿಯಂತರರ ಮೂಲಕ ನಿರ್ವಹಿಸಲ್ಲಾಗಿರುವುದಾಗಿಯೂ, ಲೆಕ್ಕ ಶೀರ್ಷಿಕೆ 3054-4-337-1-78 ರಲ್ಲಿಯ ಕಾಮಗಾರಿಯನ್ನು ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ ಔರಾದ್(ಬಿ) ದಲ್ಲಿ ಕಾರ್ಯನಿರ್ವಹಿಸುತ್ತಿರುವ ಅಭಿಯಂತರುಗಳ ಮೂಲಕ ನಿರ್ವಹಿಸಲಾಗಿದೆಂದು, ಲೆಕ್ಕಶೀರ್ಷಿಕೆ (ಗಿರಿಜನ ಉಪಯೋಗಿ) 2225-02-796-1-01 ರಲ್ಲಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ ಔರಾದ್(ಬಿ)ದಲ್ಲಿ ಕಾರ್ಯನಿರ್ವಹಿಸುತ್ತಿರುವ ಅಭಿಯಂತರುಗಳ ಮೂಲಕ ನಿರ್ವಹಿಸಲಾಗಿದೆಂದು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಲೆಕ್ಕಶೀರ್ಷಿಕೆ 22235-02-11-020-79 ರಲ್ಲಿಯ ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ ಔರಾದ್(ಬಿ) ದಲ್ಲಿ ಕಾರ್ಯನಿರ್ವಹಿಸುತ್ತಿರುವ ಅಭಿಯಂತರುಗಳ ಮೂಲಕ ನಿರ್ವಹಿಸಲಾಗಿದೆ, ಹಾಗೂ ಸರ್ಕಾರಕ್ಕೆ ಭರಿಸಬೇಕಾದ ರಾಜಧನ, ಆದಾಯ ತೆರಿಗೆ, ಮತ್ತು ಮಾರಾಟ ತೆರಿಗೆ ನಿಯಮಾನುಸಾರ ಭರಿಸಲಾಗಿರುವುದರಿಂದ ಅವರ ವಿರುದ್ಧದ ಶಿಸ್ತು ಕ್ರಮವನ್ನು ಕೈಬಿಡಬೇಕೆಂದು ಕೋರಿರುತ್ತಾರೆ.

ಆಪಾದಿತ ಅಧಿಕಾರಿ ಸಲ್ಲಿಸಿರುವ ಲಿಖಿತ ಹೇಳಿಕೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ, 2007-08ನೇ ಸಾಲಿನಲ್ಲಿ ಬೀದರ್ ಜಿಲ್ಲೆಯ ಔರಾದ(ಬಿ) ತಾಲ್ಲೂಕಿನ ಕೆಲ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಟೆಂಡರ್ ಪ್ರಕ್ರಿಯೆ ಪ್ರಾರಂಭಿಸದೇ /ಅನುಸರಿಸದೇ ಕಾಮಗಾರಿಗಳನ್ನು ನಿರ್ವಹಿಸಿದ ಆರೋಪವು ಪರೋಕ್ಷವಾಗಿ ರುಜುವಾತಾಗಿದೆ. ಆದ್ದರಿಂದ ಸದರಿ ಅಧಿಕಾರಿಯ ಕರ್ತವ್ಯಲೋಪಕ್ಕೆ ಸಂವಾದಿಯಾಗಿ ಅವರ ವೇತನವನ್ನು 3 ಹಂತಗಳು ಸಂಚಿತ ಪರಿಣಾಮವಿಲ್ಲದಂತೆ (Without cumulative effect) ಒಂದು ತಿಂಗಳ ಅವಧಿಗೆ ಕೆಳಗಿಳಿಸುವ ದಂಡನೆಯನ್ನು ವಿಧಿಸಲು ಸರ್ಕಾರವು ನಿರ್ಣಯಿಸಿದೆ. ಅದರಂತೆ ಈ ಆದೇಶ .

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 141 ವಿಸೇಬಿ 2013 ಬೆಂಗಳೂರು ದಿನಾಂಕ:28-02-2014**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದ ಶ್ರೀ ಶಿವರಾಂ ಕೆ. ಚವ್ಹಾಣ, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಔರಾದ್, ಬೀದರ್ ಜಿಲ್ಲೆ ಪ್ರಸ್ತುತ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಬಸವಕಲ್ಯಾಣ, ಬೀದರ್ ಜಿಲ್ಲೆ ಇವರಿಗೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು

1957ರ ನಿಯಮ 8(iv-ಎ)ರನ್ವಯ ಅವರ ವೇತನವನ್ನು ಸಂಚಿತ ಪರಿಣಾಮವಿಲ್ಲದಂತೆ (Without cumulative effect) 3 ಹಂತಗಳಿಗೆ ಒಂದು ತಿಂಗಳ ಅವಧಿಯ ತನಕ ಕೆಳಗಿಳಿಸುವ ದಂಡನೆಯನ್ನು ವಿಧಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಚಂದ್ರಶೇಖರ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಗೆ:

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಬೀದರ್.
3. ಸಂಬಂಧಿಸಿದ ಅಧಿಕಾರಿ (ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಬೀದರ್. ಇವರ ಮುಖಾಂತರ)
4. ಸರ್ಕಾರದ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿ(ಪಂ.ರಾಜ್)/ಅಪರ ಕಾರ್ಯದರ್ಶಿ (ಆಡಳಿತ), ಗ್ರಾ.ಅ. & ಪಂ.ರಾಜ್ ಇಲಾಖೆ, ಇವರ ಆಪ್ತ ಶಾಖೆಗೆ.
5. ವಿಶೇಷಾಧಿಕಾರಿ, ಗಣಕ ಕೋಶ, ಗ್ರಾ.ಅ.ಪಂ.ರಾಜ್ ಇಲಾಖೆ.
6. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.